
॥ ನ ಹಿ ಜ್ಞಾನೇನ ಸದೃಶಂ ಪವಿತ್ರಮ್ ॥ ॥ ನ ಹಿ ಗುರೋಃ ಪರಂ ದೈವತಮ್ ॥

# VIJAYA GROUP OF INSTITUTIONS

No. 32, 15th Cross, Southend Circle, III Block, Jayanagar, Bengaluru - 560011






JULY – AUG – 2025
ISSUE - 30

FOURTH ANNIVERSARY

MEET THE

# EDITORIAL TEAM

## Chief Patron

**Sri. J. R. Seetharama Shastry**
Managing Trustee, VGI

## Chief Editor

**Dr. Nagaraj Hosurkar**
VEIT Degree College

## Facilitators

**Sri. P L Mohan Kumar**
Vijaya Composite PU College

**Smt. L Yajurvedha**
VEIT Degree College

## Coordinator

**Sri. Shankaracharya**
Director Of Academics, VGI

## Procurement Team

**Sri. C Ravi Keerthi**
VEIT Degree College

**Smt. Mythri A R**
VEIT Degree College

**Sri. Sunil B M**
VEIT Degree College

**Smt. Padmavathi T**
Vijaya Composite PU College

**Kum Srilakshmi**
Vijaya Composite PU College

**Smt. Poornima S S**
Vijaya High School

**Smt. Meri Kavitha**
Vijaya Kannada Higher Primary School

**Smt. Nabanitha Paul**
Vijaya English Primary School

**Sri. Mohith KJ**
Digital Operator, Designer, Software Developer

## Student Coordinators

### VEIT Degree College:

- **Kum. Jahnavi,** III YEAR, B.C.A
- **Kum. C V Vaishnavi Roa,** I YEAR, B.Com
- **Kum. Roshini A,** I YEAR, B.Com
- **Kum. Ashritha M Nag,** I YEAR, B.Com

### Vijaya Composite PU College:

- **Kum. Lakshmi J Shet,** II YEAR
- **Kum. Yuvashreya,** II YEAR
- **Kum. Nithyashree S,** II YEAR
- **Kum. Sahana K S,** II YEAR

### Vijaya Academy of Science Education (VASE):

- **Chi. Sachin C S,** II YEAR, 'E'
- **Chi. Kuval Venkatesh,** II YEAR, 'D'

### Vijaya High School:

- **Chi. Benaka,** 10th Std.
- **Kum. Amreen,** 10th Std.
- **Chi. Shriram,** 10th Std.
- **Kum. Tejonidhi,** 9th Std.
- **Chi. Avin,** 9th Std.
- **Kum. Asfiya Mehak,** 9th Std.

### Vijaya Kannada Higher Primary School:

- **Chi. Roshan Gowda H N,** 7th Std.
- **Kum. Janvika,** 6th Std.

### Vijaya English Primary School:

- **Kum. Anagha,** 10th Std.
- **Chi. Srujan,** 10th Std.


## Feedback/Suggestions To:

editorialteam@vijayainstitutions.in

or

WhatsApp to:9448762080

# VOICE OF VIJAYA
## FOURTH ANNIVERSARY

**Celebrating Fourth Years of Excellence**
**A Tribute to the Team behind Our College Digital Magazine**

As we mark the fourth anniversary of our college's Digital Newsletter - **VOICE OF VIJAYA**, it's a moment to reflect on the journey that has brought us here and to express our deepest appreciation for the incredible effort, creativity, and dedication that has gone into making this platform and ongoing successful accomplishment.

We are delighted to share a moment of immense pride as "Voice of Vijaya" — our esteemed Bi - Monthly Digital Magazine — marks the successful completion of Four Glorious Years this August.

Over the years, the magazine has blossomed into a treasure trove of knowledge, offering diverse, insightful and enriching content across a wide spectrum of topics.

Voice of Vijaya extends its heartfelt appreciation and congratulations to the entire Editorial Team, our dedicated student facilitators, talented authors and the DTP and Design Team, whose unwavering commitment and creative voices have been instrumental in shaping this remarkable journey.

This milestone would not have been possible without your constant support, tireless dedication, and collaborative spirit. Your relentless efforts have ensured the smooth publication of every edition and kept the magazine vibrant and engaging.

The Vijaya Group of Institutions, deeply acknowledges and applauds the passion, perseverance and excellence that each one of you has contributed to sustaining the magazine's energy and vision.

Here's to many more years of success, growth, and the power of the written word!

Thank you to everyone who has contributed to this incredible journey.



# ಸಂಪಾದಕೀಯ

ಆತ್ಮೀಯರೇ ನಮಸ್ಕಾರ, ತಮ್ಮೆಲ್ಲರ ನೆಚ್ಚಿನ "ವಿಜಯ ಡಿಜಿಟಲ್ ದ್ವೈಮಾಸಿಕ ಪತ್ರಿಕೆ" ಈಗ ನಾಲ್ಕು ವರ್ಷಗಳನ್ನು ಪೂರೈಸಿ ಐದನೇ ವರ್ಷಕ್ಕೆ ಕಾಲಿಡುತ್ತಿದೆ. ಇದಕ್ಕೆ ಅಧ್ಯಕ್ಷರು ಹಾಗೂ ಸಿಇಒ ಅವರ ಬೆಂಬಲ ಮತ್ತು ಇತರ ಅಧ್ಯಾಪಕ ಬಂಧುಗಳ ಸಹಕಾರವೇ ಪ್ರಮುಖ ಕಾರಣ. ಅದಕ್ಕಾಗಿ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು.

ಆರಂಭದಿಂದಲೂ ಪತ್ರಿಕೆ ತನ್ನದೇ ಆದ ವಿಶಿಷ್ಟ ರೂಪು ರೇಖೆಗಳನ್ನು ಹೊಂದಿ ವಿದ್ಯಾರ್ಥಿ ಸ್ನೇಹಿ ಯಾಗಿ ಮೂಡಿಬಂದಿದೆ. ಸಾಕಷ್ಟು ವಿದ್ಯಾರ್ಥಿಗಳು ಈ ಪತ್ರಿಕೆಯಲ್ಲಿ ಲೇಖನಗಳನ್ನು ಪ್ರಕಟಿಸಿದ್ದಾರೆ. ಸಾಕಷ್ಟು ಜನ ಅಧ್ಯಾಪಕ ಬಂಧುಗಳು ತಮ್ಮ ಲೇಖನಗಳನ್ನು ನೀಡಿ ಹಾಗೂ ವಿದ್ಯಾರ್ಥಿಗಳಿಗೆ ಉತ್ತಮ ಲೇಖನಗಳನ್ನು ಬರೆಯಲು ಪ್ರೋತ್ಸಾಹಿಸಿ ಸಹಕಾರ ನೀಡಿದ್ದಾರೆ. ಹೀಗೆ ಎಲ್ಲರ ಸಹಕಾರ ಹಾಗೂ ಸಹಾಯಗಳ ಪ್ರತಿರೂಪವಾಗಿ ಈ ಪತ್ರಿಕೆ ಹೊರ ಬರುತ್ತಿದೆ. ಈ ಪತ್ರಿಕೆಯ ಯಶಸ್ಸಿನಲ್ಲಿ ಎಲ್ಲರೂ ಸಹಭಾಗಿಗಳು. ಮುಂದೆಯು ಪತ್ರಿಕೆಯ ವಿಕಾಸದಲ್ಲಿ ತಾವೆಲ್ಲರೂ ಇದೇ ರೀತಿ ಕೈಜೋಡಿಸಿ ಮುನ್ನಡೆಸುತ್ತೀರೆಂದು ಭಾವಿಸುತ್ತೇವೆ.

**ಮತ್ತೊಮ್ಮೆ ತಮಗೆಲ್ಲ ಹೃತ್ಪೂರ್ವಕ ಧನ್ಯವಾದಗಳು**


**ಸಂಪಾದಕ ಮಂಡಳಿಯ ಪರವಾಗಿ**
**ಡಾ. ನಾಗರಾಜ್ ಹೊಸೂರಕರ್**
**ಪ್ರಧಾನ ಸಂಪಾದಕರು**
**ವಾಯ್ಸ್ ಆಫ್ ವಿಜಯ ದ್ವೈಮಾಸಿಕ ಪತ್ರಿಕೆ**

**Bhagavad - Gītā says**

उद्धरेदात्मनाऽत्मानं नात्मानमवसादयेत् ।
आत्मैव ह्यात्मनो बन्धुरात्मैव रिपुरात्मनः ॥ (6.5)

Lift yourself by yourself; do not let yourself down. For you are your own friend, and you are your own enemy.

## Cartoon Corner



**Kum. C V Vaishnavi Roa,**
I YEAR, B.Com

# Table of Contents



- PRIDE OF OUR ALUMNI'S JOURNEY
- ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರುನಾಡಿನ ವೀರರು
- THE EXPLORER
  - * FOUNDERGRAPHY
    - Kiran Mazumdar-Shaw: The Accidental Entrepreneur
  - * OOPS! THAT CHANGED THE WORLD
- BIT BY BIT
  - * *NILGIRIS – A Shared Wilderness ( A Documentory Film)*
- ಉದಾರಚರಿತರು
  - * ಆದರ್ಶ ಬದುಕಿನ ರೂವಾರಿ
- ನಾಡು ನುಡಿ
  - * ವಿಶ್ವ ಪಾರಂಪರಿಕ ತಾಣ (ಮುಂದುವರೆದ ಭಾಗ) – ಐಹೊಳೆ
- ಸಂಸ್ಕೃತ ಸೌರಭ
  - * ಶ್ರೀ ಕೃಷ್ಣ
- LIFE SKILLS
  - * ಹೊಂಗಿರಣ
  - * ಸೂಕ್ತಿಸುಧಾ
- YOGA
  - * ಶ್ರೀ ಸತ್ತ್ವ ಯೋಗ
- ACHIEVERS
- SPECIAL EVENTS
- PHOTO & ART GALLERY
- PUC RESULT
- DEGREE RESULT


## Feedback/Suggestions To:


editorialteam@vijayainstitutions.in
or
WhatsApp to:9448762080

# PRIDE OF OUR ALUMNI'S JOURNEY

## My Journey from Andhra to Graduation



**Name : Kum. G C Divya**
**VEIT Degree : 2013 - 2016**

**G C Divya was an enthusiastic and bright student, always eager to participate in academic activities. Her dedication, discipline, and hard work were evident in all aspects of her academic journey. She had a keen interest in accounting and related subjects, often going beyond the syllabus to deepen her understanding. Her consistent efforts led her to achieve outstanding academic results. Notably, she won a silver jubilee commemoration prize by ICAI, Bangalore chapter for securing the top position in Cost Accounting at the university level. Divya's performance was a reflection of her strong work ethic and commitment to excellence.**

### My Journey from Andhra to Graduation

Leaving home and stepping into a new city for higher studies is never easy, and mine began with the same mix of excitement and fear. I came from Andhra Pradesh to pursue my graduation, carrying with me the hopes of my family and my own dreams of building a better future. Living away from home also brought new responsibilities. From managing my daily schedule to taking care of small things, every task was a learning curve. But gradually, I realized that this independence was shaping me into a stronger and more responsible version of myself.

### An Unexpected Beginning: My Journey at VEIT

Life is often a journey of unexpected turns, and my educational path stands as a testimony to this. Born and brought up in Andhra Pradesh, I always carried with me the simplicity of my hometown, along with the big dreams for the future. The decision to step out of my comfort zone and pursue my graduation away from home was not an easy one, but it turned out to be one of the most defining choices of my life.

My journey with VEIT Degree College began in 2021, not as part of a carefully planned decision, but rather as an unexpected choice. Until the very last moment, my intention was to join SSMRV College. However, circumstances led me instead to Vijaya Education Institute Trust (VEIT), and looking back today, I can confidently say that this decision-though unplanned- became one of the most transformative chapters of my life.

Walking into VEIT Degree College for the first time, I carried mixed feelings. On one hand, there was the uncertainty of joining a college I had not initially chosen. On the other, there was curiosity about what lay ahead. Adjusting to a new environment, meeting unfamiliar faces, and stepping into a system different from what I had expected was not easy. However, the warmth and support I received from the faculty and fellow students helped me settle in quickly. What I feared might be a compromise soon turned into a blessing in disguise. VEIT opened doors that I had never anticipated, offering me experiences, lessons, and opportunities that went far beyond academics.



### Academic Journey and Achievement

Academics were one of my initial hurdles. Adapting to a new syllabus and adjusting to a different style of teaching took time. Sometimes I doubted myself and wondered if I had made the right choice by coming so far from home.


© 2025 - VIJAYA GROUP OF INSTITUTIONS

# PRIDE OF OUR ALUMNI'S JOURNEY

There were days when Pressure from exams, deadlines, and self-doubt weighed heavily on me. Sometimes, even after putting in hours of Preparation, results were not as expected. Those moments were difficult, but instead of giving up, I used them as lessons to improve myself. I really thank, my teachers reminded me that growth lies in persistence. Their encouragement gave me the courage to keep trying.

Stage fear was another challenge. I had always been hesitant to speak in front of a crowd. But opportunities kept coming my way-seminars, class presentations, and cultural activities. At first, I avoided them, but eventually, I gathered the courage to participate. I still remember the first time I held a microphone in the event for the product launch, my hands trembled, but with practice and encouragement, I began to overcome that fear. Today, speaking in front of people feels natural, and I owe that transformation to the supportive environment of my college.

As days turned into months, I started to explore beyond academics. I participated in cultural events, presentations, sports, and seminars. Every experience, whether a win or a loss, added a new layer of confidence. I discovered that true growth doesn't always come from textbooks but from the opportunities we dare to take. One of the greatest blessings of my journey was the guidance of my teachers. They were more than just educators. Their constant motivation helped me plan my studies better and manage my time wisely. Equally important were the friendships I built here. Friends became my family away from home. We studied together, celebrated festivals, shared meals, and supported each other through tough times. These bonds gave me the courage to face challenges and the joy of creating memories that I will cherish forever.

My graduation is more than just a certificate or a qualification- it represents years of efforts, growth, and transformation. It is the result of late night studies, countless sacrifices, and determination to move forward despite obstacles. Academically, I grew from being a student who was uncertain about the future to someone who could take on challenges with confidence. Personally, I learned independence, resilience, and the courage to dream bigger.

Today, as I reflect on my journey, I feel immense gratitude toward VEIT Degree College. Scoring the highest in the university always a dream for every student and finally I have scored the highest with 3690 marks out of 4200 in cost accounting stands as a milestone.

I will always be thankful to my teachers for their guidance, to my friends for their constant support, to the institution for giving me the platform to discover my potential, and to my parents who believed in me for every time. I realize how much I have grown. From a shy student who hesitated to speak up, I have become someone who can confidently present ideas and face challenges. From struggling with homesickness, I have learned the value of independence and resilience.

Now looking back at my journey, I see a story of perseverance, learning, and transformation. Every challenge I faced became a lesson, every achievement a reminder of what dedication can achieve. This journey taught me that education is not just about marks or degrees- it is about growth, character, and the ability to overcome difficulties with courage. My graduation marks not just like completion of a chapter, but the beginning of new opportunities where I will continue to learn, grow, and achieve.

Finally I would like to say: - Never be afraid of stepping out of your comfort zone. The beginning may feel tough, but it is in those struggles that you find your strength. Don't shy away from opportunities-whether big or small-because every experience teaches you something valuable.



© 2025 - VIJAYA GROUP OF INSTITUTIONS

# ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರುನಾಡಿನ ವೀರರು

ಇತಿಹಾಸದಿಂದ ನಾವು ಕಲಿಯಬೇಕಿರುವುದು ಬಹಳಷ್ಟು. ಸ್ವಾತಂತ್ರ ಚಳುವಳಿಯ ಸಂದರ್ಭದಲ್ಲಿ ನಾಡಿಗಾಗಿ ಹೋರಾಡಿ ಮಡಿದ ಅನೇಕ ವೀರರ ಸಾಹಸ, ತ್ಯಾಗ, ಛಲ, ಸಂಕಲ್ಪ ಶಕ್ತಿ ಮುಂತಾದ ಗುಣಗಳು ನಮಗೆ ದಾರಿ ದೀಪವಾಗಿವೆ.

ನಾಡು ನುಡಿಯ ರಕ್ಷಣೆಯ ಸಂದರ್ಭ ಎದುರಾದಾಗ, ಶ್ರೀಸಾಮಾನ್ಯರು ಯಾವ ರೀತಿಯ ಜವಾಬ್ದಾರಿಯನ್ನು ಹೊಂದಬೇಕೆಂಬುದಕ್ಕೆ ಕನ್ನಡ ನಾಡಿನ ವೀರಾಗ್ರಣಿಗಳು ಎನಿಸಿದ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ, ಹಲಗಲಿಯ ಬೇಡರು, ಸುರಪುರದ ವೆಂಕಟಪ್ಪ ನಾಯಕರಂತಹ ದೇಶಪ್ರೇಮಿಗಳು ನಮಗೆ ಸ್ಫೂರ್ತಿ, ಶಕ್ತಿಯನ್ನು ನಿರಂತರವಾಗಿ ತುಂಬುತ್ತಲೇ ಇರುತ್ತಾರೆ.

**ಸುರಪುರದ ರಾಜಾ ವೆಂಕಟಪ್ಪ ನಾಯಕ**



ಯಾದಗಿರಿ ಜಿಲ್ಲೆಯ ಸುರಪುರ ಕೃಷ್ಣಾ ಹಾಗೂ ಭೀಮಾ ನದಿಗಳ ಮಧ್ಯದಲ್ಲಿದೆ. ಬ್ರಿಟಿಷರು ಮತ್ತು ಹೈದರಾಬಾದ್ ನಿಜಾಮನ ಒಪ್ಪಂದದಂತೆ ಈ ಸಂಸ್ಥಾವು ನಾಯಕರ ಅಧೀನಕ್ಕೆ ಬಂದಿತು. ರಾಜಾ ಕೃಷ್ಣಪ್ಪ ನಾಯಕನ ನಂತರ ಅವನ ಮಗ ರಾಜಾ ನಾಲ್ವಡಿ ವೆಂಕಟಪ್ಪ ನಾಯಕ ಅಧಿಕಾರಕ್ಕೆ ಬಂದನು. ಈ ವೇಳೆಯಲ್ಲಿ ಉತ್ತರ ಭಾರತದಲ್ಲಿ ಪ್ರಥಮ ಸ್ವಾತಂತ್ರ ಸಂಗ್ರಾಮ (1857) ಆರಂಭವಾಗಿತ್ತು. ಇದರ ಕಾವು ಸುರಪುರವನ್ನು ತಟ್ಟಿತು.

ನಾಲ್ವಡಿ ವೆಂಕಟಪ್ಪ ನಾಯಕ ತನ್ನ ಸಂಪರ್ಕದಲ್ಲಿದ್ದ ರಾಜರನ್ನೆಲ್ಲ ಒಂದುಗೂಡಿಸಿ ಬ್ರಿಟಿಷರ ವಿರುದ್ಧ ಸಮರ ಸಾರುವ ಹವಣಿಕೆಯಲ್ಲಿದ್ದನು. ಅವನು ತನ್ನ ಸೈನ್ಯದಲ್ಲಿ ಅರಬ್ ರೋಹಿಲ್ಲರನ್ನು ಸಹ ಸೇರಿಸಿಕೊಂಡರು. ಅಲ್ಲದೆ ತನ್ನ ಸೈನ್ಯವನ್ನು ತರಬೇತಿಗೊಳಿಸಲು ಇತರರ ಸಹಾಯ ಪಡೆದನು. ಬ್ರಿಟಿಷ್ ಬಣವು 1858 ರಲ್ಲಿ ಸುರಪುರದ ಮೇಲೆ ದಾಳಿ ಮಾಡಿತು. ಈ ದಾಳಿಯನ್ನು ಸುರಪುರದ ವೆಂಕಟಪ್ಪ ನಾಯಕರು ಅತ್ಯಂತ ಶೌರ್ಯದಿಂದ ಎದುರಿಸಿ ವೀರವೇಶದಿಂದ ಹೋರಾಡಿದರು.

**ಕಿತ್ತೂರು ರಾಣಿ ಚೆನ್ನಮ್ಮ**



ವೀರವನಿತೆ ಕಿತ್ತೂರಿನ ರಾಣಿ ಚೆನ್ನಮ್ಮ ರಾಜ ಮಲ್ಲಸರ್ಜ ದೇಸಾಯಿಯ ಕಿರಿಯ ಪತ್ನಿ. ಮಲ್ಲಸರ್ಜ ಹಾಗೂ ಅವನ ಉತ್ತರಾಧಿಕಾರಿ ಮಗ ತೀರಿಕೊಂಡ ಬಳಿಕ ಚೆನ್ನಮ್ಮ ಶಿವಲಿಂಗಸರ್ಜನನ್ನು ದತ್ತಕ್ಕೆ ತೆಗೆದುಕೊಂಡು ರಾಜ್ಯವಾಳಲು ಪ್ರಾರಂಭಿಸಿದಳು. ಧಾರವಾಡದ ಕಲೆಕ್ಟರ್ ಈ ದತ್ತು ಸ್ವೀಕಾರ ಕ್ರಮಬದ್ಧವಲ್ಲ ಎಂಬ ಕುಂಟು ನೆಪ ತೆಗೆದು ಕಿತ್ತೂರಿನ ಆಡಳಿತವನ್ನು ಬ್ರಿಟಿಷ್ ಸರ್ಕಾರವೇ ವಹಿಸಿಕೊಳ್ಳಬೇಕೆಂದು ಶಿಫಾರಸು ಮಾಡಿದ. ಈ ವಿಚಾರವನ್ನು ತಿಳಿದು ಚೆನ್ನಮ್ಮ ಕಿಡಿಕಿಡಿ ಆದಳು. ಬ್ರಿಟಿಷರ ದಮನ ನೀತಿಯನ್ನು ಪ್ರತಿಭಟಿಸಿ, ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಲು ನಿರ್ಧರಿಸಿದಳು.

ಥ್ಯಾಕರೆ ಐದುನೂರು ಮಂದಿ ಸೈನಿಕರೊಂದಿಗೆ ಕಿತ್ತೂರಿಗೆ ಬಂದ. ಘೋರವಾದ ಯುದ್ಧ ನಡೆಯಿತು. ಚೆನ್ನಮ್ಮ ತನ್ನ ಸೈನ್ಯದೊಂದಿಗೆ ಬ್ರಿಟಿಷರ ವಿರುದ್ಧ ಪರಾಕ್ರಮದಿಂದ ಹೋರಾಡಿದಳು. ಬ್ರಿಟಿಷ್ ಸೈನ್ಯ ದಿಕ್ಕು ಪಾಲಾಯಿತು. ಥ್ಯಾಕರೆ ಯುದ್ಧದಲ್ಲಿ ಅಸು ನೀಗಿದನು. ಥ್ಯಾಕರೆಯ ಮರಣದ ಬಳಿಕ ಬ್ರಿಟಿಷ್ ಸೈನ್ಯ ಮತ್ತೊಮ್ಮೆ ಕಿತ್ತೂರನ್ನು ಮುತ್ತಿತು. ಕಿತ್ತೂರಿನ ಸೈನ್ಯ ಚಿಕ್ಕದಾಗಿತ್ತು. ಬ್ರಿಟಿಷರ ಬಹುದೊಡ್ಡ ಸೈನ್ಯದ ಮುಂದೆ ಕಿತ್ತೂರು ಸೈನ್ಯ ಮಂಡಿಯೂರ ಬೇಕಾಯಿತು. ಚೆನ್ನಮ್ಮನ ಕಡೆಯ ಕೆಲವರು ಅವಳಿಗೆ ಮೋಸ ಮಾಡಿದರು. ಬ್ರಿಟಿಷರು ಚನ್ನಮ್ಮನನ್ನು ಸೆರೆ ಹಿಡಿದು ಬೈಲುಹೊಂಗಲ ಜೈಲಿನಲ್ಲಿ ಇಟ್ಟರು. ಐದು ವರ್ಷಗಳ ಕಾಲ ಸೆರೆಯಲ್ಲಿದ್ದ ರಾಣಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಧೀರರಿಗೆ ಸಂದೇಶಗಳನ್ನು ಕಳಿಸುತ್ತ, ಪ್ರಚೋದಿಸುತ್ತಿದ್ದಳು.ಬ್ರಿಟಿಷ್ ಪ್ರಭುತ್ವವನ್ನು ವಿರೋಧಿಸಿದ ಪ್ರಥಮ ಭಾರತೀಯ ನಾರಿ ಎನ್ನುವ ಕೀರ್ತಿ ಕಿತ್ತೂರು ಚೆನ್ನಮ್ಮನಿಗೆ ಸಲ್ಲುತ್ತದೆ. ಅವಳು ಭಾರತದ ಸ್ವಾತಂತ್ರ್ಯ ಹೋರಾಟದ ಬೆಳ್ಳಿಚುಕ್ಕಿಯಾಗಿ ಕಂಗೊಳಿಸುತ್ತಿದ್ದಾಳೆ. ಅವರ ನೆನಪಿನಲ್ಲಿ ಈಗಲೂ ಸಹ ಲಾವಣಿಗಳನ್ನು ಹಾಡುತ್ತಾರೆ.



✍ ಕರಣ್ ಗೌಡ ಹೆಚ್ ಜಿ
5ನೇ ತರಗತಿ
ವಿಜಯ ಕನ್ನಡ ಹಿರಿಯ ಪ್ರಾಥಮಿಕ ಶಾಲೆ



✍ ಲಾವಣ್ಯ ಹೆಚ್.
5ನೇ ತರಗತಿ
ವಿಜಯ ಕನ್ನಡ ಹಿರಿಯ ಪ್ರಾಥಮಿಕ ಶಾಲೆ


© 2025 - VIJAYA GROUP OF INSTITUTIONS

# ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರುನಾಡಿನ ವೀರರು

## ಸಂಗೊಳ್ಳಿ ರಾಯಣ್ಣ




ಸಂಗೊಳ್ಳಿ ರಾಯಣ್ಣ ಚೆನ್ನಮ್ಮನ ನಿಷ್ಠಾವಂತ ಬಂಟ. ಜನಸಾಮಾನ್ಯರ ಮಧ್ಯ ಮೂಡಿ ಬಂದ ಸ್ವಾತಂತ್ರ್ಯ ವೀರ. ರಾಣಿ ಚೆನ್ನಮ್ಮನ ಬಂಧನವಾದ ಮೇಲೆ ಕಿತ್ತೂರಿನ ನಾಯಕತ್ವ ವಹಿಸಿ ಸೈನ್ಯವನ್ನು ಸಂಘಟಿಸಿದ. ಬ್ರಿಟಿಷರ ಕಚೇರಿಗಳನ್ನು ಸುಟ್ಟು, ಖಜಾನೆಗಳನ್ನು ಲೂಟಿ ಮಾಡಿದ. ಗೆರಿಲ್ಲ ಮಾದರಿ ಯುದ್ಧದಲ್ಲಿ ನಿಷ್ಣಾತನಾಗಿದ್ದ ರಾಯಣ್ಣ, ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿದ್ದ. ನೇರ ಯುದ್ಧದಲ್ಲಿ ಅವರನ್ನು ಸೋಲಿಸಲು ಸಾಧ್ಯವಾಗದೆ, ಬ್ರಿಟಿಷರು ಕುಟಿಲೋಪಾಯ ಮಾಡಿದರು. ಹಣದಾಸೆಗೆ ಬಲಿ ಬಿದ್ದ ದೇಶದ್ರೋಹಿಗಳು ರಾಯಣ್ಣನನ್ನು ಮೋಸದಿಂದ ಸೆರೆ ಹಿಡಿದು ಕೊಟ್ಟರು. ರಾಯಣ್ಣ ಹಾಗೂ ಅವನ ಆರು ಮಂದಿ ಸಂಗಡಿಗರನ್ನು ಗಲ್ಲಿಗೇರಿಸಲಾಯಿತು. ಅಂತ್ಯದರ್ಶನ ಪಡೆಯಲು ಬಂದಿದ್ದ ತಾಯಿ ಕೆಂಚವ್ವನಿಗೆ ರಾಯಣ್ಣ ಅಡ್ಡ ಬಿದ್ದು ಆಶೀರ್ವಾದ ಪಡೆದು ನಗುನಗುತ್ತಲೇ ಗಲ್ಲುಗಂಬ ಏರಿದ. ರಾಯಣ್ಣ ಮತ್ತು ಆತನ ಸಂಗಡಿಗರನ್ನು ನಂದಗಡದಲ್ಲಿ ಸಮಾಧಿ ಮಾಡಿದರು.

ರಾಯಣ್ಣನ ಮರಣಾನಂತರವೂ ಸಹ ಅವನ ಅನುಯಾಯಿಗಳು ಬಂಡಾಯವನ್ನು ಮುಂದುವರಿಸಿ ರಾಯಣ್ಣನ ಕನಸನ್ನು ಈಡೇರಿಸಲು ಪ್ರಯತ್ನಿಸಿದರು.



✍ ಕನಕಪ್ರಿಯ ಎನ್ ಹೆಚ್ ಗೌಡ
5ನೇ ತರಗತಿ
ವಿಜಯ ಕನ್ನಡ ಹಿರಿಯ ಪ್ರಾಥಮಿಕ ಶಾಲೆ

## ಹಲಗಲಿಯ ಬೇಡರು



1857ರಲ್ಲಿ ಬ್ರಿಟಿಷರು ಜಾರಿಗೆ ತಂದ ಶಸ್ತ್ರಾಸ್ತ್ರ ಕಾಯ್ದೆಯಂತೆ ಭಾರತ ಸರ್ಕಾರದ ಅಪ್ಪಣೆ ಪಡೆದುಕೊಂಡ ಆಯುಧಗಳನ್ನು ಇರಿಸಿಕೊಳ್ಳಬೇಕಾಗಿತ್ತು. ಆದರೆ ಸ್ವಭಾವತಃ ಶೂರರೂ, ಸ್ವಾಭಿಮಾನಿಗಳೂ ಆದ ಹಲಗಲಿಯ ಬೇಡ ನಾಯಕರಿಗೆ ಇದು ನುಂಗಲಾರದ ತುತ್ತಾಯಿತು. ಈ ಕಾರಣದಿಂದಾಗಿ ಘರ್ಷಣೆ ನಡೆದು, ಬ್ರಿಟಿಷರು ಹಲಗಲಿಯ ಬೇಡರ ಮೇಲೆ ದಾಳಿ ನಡೆಸಿದರು. ಜಡಗ, ಬಾಲ, ರಾಮಿ ಮುಂತಾದ ನಾಯಕರು ಕೆಚ್ಚೆದೆಯಿಂದ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದರು.

ಈ ಹೋರಾಟದಲ್ಲಿ ಅನೇಕ ವೀರರು ವೀರಮರಣ ಅಪ್ಪಿದರು. ಬ್ರಿಟಿಷ್ ಸೈನಿಕರು ಸುಮಾರು 290 ಜನರನ್ನು ಸೆರೆಹಿಡಿದರು. ಅವರಲ್ಲಿ 19 ಮಂದಿಯನ್ನು ಗಲ್ಲಿಗೇರಿಸಲಾಯಿತು. ಹಲಗಲಿ ಬೇಡ ನಾಯಕರ ವೀರಗಾಥೆ ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಅಮರವಾಗಿದೆ. ಹಲಗಲಿ ದಂಗೆಯಲ್ಲಿ ಮೂರು ಜನ ಬ್ರಿಟಿಷ್ ಸೈನಿಕರನ್ನು ಗುಂಡಿಕ್ಕಿ ಕೊಂದ ರಾಮಿ ಬೇಡರ ವೀರ ಮಹಿಳೆ. ಈ ದಂಗೆಯಲ್ಲಿ ಅವಳು ವೀರಮರಣ ಹೊಂದುತ್ತಾಳೆ.

ಹಲಗಲಿಯ ಬೇಡರ ಶೌರ್ಯವನ್ನು ಕುರಿತು ಇಂದಿಗೂ ಲಾವಣಿಕಾರರು ಅನೇಕ ಲಾವಣಿಗಳನ್ನು ಕಟ್ಟಿ ಹಾಡುತ್ತಾರೆ. "ಹಲಗಲಿಯ ಬೇಡರು ಹುಲಿಗಿಂತ ಶೂರರು ಚಲಿಸದೆ ನಿಂತು ಹೋರಾಡಿ ಮಾಡಿದವರು ಕುಲ ಹಿರಿಮೆ ಮರೆಸಿ ಹೋಗ್ಯಾರ" ಎಂಬ ಲಾವಣಿ ಇಂದಿಗೂ ಹಲಗಲಿ ಬೇಡರ ಶೌರ್ಯಗಾಥೆಯನ್ನು ಹೇಳುತ್ತದೆ.



✍ ಸಂಜನಾ ಹೆಚ್.ಜಿ
5ನೇತರಗತಿ
ವಿಜಯ ಕನ್ನಡ ಹಿರಿಯ ಪ್ರಾಥಮಿಕ ಶಾಲೆ


© 2025 - VIJAYA GROUP OF INSTITUTIONS

# THE EXPLORER

## FOUNDERGRAPHY

### Kiran Mazumdar-Shaw: The Accidental Entrepreneur



Kiran Mazumdar-Shaw: The Accidental EntrepreneurBorn in Bangalore in 1953, Kiran Mazumdar-Shaw never imagined she'd become one of India's most powerful women in business. Her dream was to become a brewmaster like her father, who worked in the brewing industry. She studied fermentation science in Australia, becoming one of the few women trained in the field. But when she returned to India in the 1970s, she was told brewing wasn't a "woman's job."Determined not to give up, Kiran shifted her focus. In 1978, with a small investment and a partnership with an Irish biotech company, she started Biocon—in the garage of her rented house. She faced constant rejection: banks refused to give loans, clients doubted her, and employees were hard to find. But she persisted.Over time, Biocon grew from a small industrial enzyme company into a global biopharmaceutical giant. Under her leadership, it became the first Indian company to manufacture and export biotech products to the U.S. and Europe.Today, Kiran Mazumdar-Shaw is celebrated not only as a pioneering businesswoman but also as a philanthropist, innovator, and role model. She showed India—and the world—that with vision, courage, and determination, even the most unexpected journeys can change lives.



✍ **Dr. Sowmya S,**
**HOD and Assistant Professor,**
**Department of Commerce**
**VEIT Degree College**

## "OOPS! THAT CHANGED THE WORLD" Cont...

1. **Radioactivity** – Energy which is invisible.

**Henri Becquerel**, a French physicist, had unknowingly discovered **radioactivity** – the ability of certain elements to **emit invisible, powerful energy** from their atoms without any external trigger like light or heat. He was experimenting with **phosphorescent materials** – substances that glow after being exposed to light. by wrapping a photographic plate in black paper and placed **uranium salts** on top, expecting that sunlight would cause the uranium to glow and affect the plate. Even **without sunlight**, the uranium had emitted **some form of invisible energy** that could penetrate black paper and affect the film.
The radioactivity has lot of applications in all fields like, Cancer treatment (radiation therapy), medical imaging (PET scans). Also for deep understanding of the atom, nuclear energy, and quantum mechanics.

**2. Vulcanized Rubber – A rubber Accident**



Even though earlier natural rubber was known, but it was **completely unreliable**.
**Charles Goodyear** —was messing around (again and again) with rubber mixed with sulfur.
He accidentally spilled the mixture onto a hot stove.And something magical happened, Instead of melting, the rubber hardened… but stayed flexible, elastic, and waterproof — even when reheated.This was vulcanization, though he didn't know the name yet. The heat and sulfur caused the rubber molecules to cross-link, giving it strength, elasticity, and durability.



✍ **Smt. HC Usha,**
**HOD, Department of Chemistry,**
**Vijaya Composite PU College**



© 2025 - VIJAYA GROUP OF INSTITUTIONS

# BIT BY BIT

## *NILGIRIS – A Shared Wilderness ( A Documentory Film)*

On a misty July evening in 2025, the curtains rose to reveal ***Nilgiris: A Shared Wilderness—*** **a** film that felt less like a documentary but more like a whispered tale of an ancient land. I had a peculiar spark about watching this film as my heart always clings for some Wilderness and Nature. I follow where my heart goes and finally I drove into PVR to watch it along with some of my school friends.



For those who missed the theatre lights, let me take you by the hand and walk you through its world on paper.

The film begins with the glimpses of the two mighty mountain chains that stretches its luminous green belt bridging the Western and Eastern Ghats. Here, in India's first UNESCO Biosphere Reserve, rivers spring to life, forests melt from evergreen density into dry deciduous slopes, boundaries drawn by humans fade into insignificance. The Nilgiri Biosphere Reserve is not just a place—it is a living confluence of climates, altitudes, ecosystems, stretching across three southern states.



We are then drawn back in time, to mountains that earned their name Nilgiri (nil = blue; giri = mountain) from a flower called **Neelakurinji**—that dyes the hillsides with its typical blue colour that blooms once every twelve years is a botanical marvel. These hills, forty million years old, guard treasures of life: the Nilgiri langur swinging through treetops, the elusive lion-tailed macaque, the proud Nilgiri tahr clinging to the cliffs.

From the ridges flow rivers—Bhavani, Moyar, Kabini, Chaliyar—each carving gorges stories into the land. Moyar, in particular, appears almost mythical, its waters vanishing as suddenly as they come, echoing the film's reverence for the fragile cycles of nature.

But the Nilgiris is not wilderness alone. Leopards prowl tea plantations, elephants wer through towns, wild dogs raise litters near villages. Even amidst human presence, life thrives in unexpected harmony. A viewer's voice drifts through the narration: *"Most wild herbivores don't actually eat tea leaves!"* A detail so small, yet it captures the quiet adaptability of nature.




The tale then shifts to memory—caves that sheltered humans ten thous years ago, railways built by the British, the spread of tea estates. These aren't framed as intrusions but as chapters of a shared history where human mountain have long lived together.


© 2025 - VIJAYA GROUP OF INSTITUTIONS

# BIT BY BIT



Legends, too, breathe through the l. Stories of melanistic leopards—ghostly dark cats slipping through forests—merge with scientific explanations of genetic adaptation. Here, folklore  ecology do not oppose; they enrich each other, just as myth  science coexist in the hearts of those who call the Nilgiris home.



Yet, the story does not shy away from fragility. It shows summers so harsh the l cracks, wildfires licking dry slopes, monsoons drowning valleys. Hyenas walking miles in the night for food, wild dogs feeding restless pups, figs ripening just in time for hornbills  mynas—all moments that reveal a delicate, precarious rhythm of survival.



The camera, which lingered in these mountains for three years, gifts us glimpses that feel almost secret: a Salea lizard weaving through the undergrowth, hornbills tenderly feeding chicks, a fig fruit tumbling into waiting beaks. Susheela Raman's narration floats over it all—gentle, haunting, sometimes distant, but always carrying us deeper into the silence of the hills.




By the end, the film becomes more than its visuals. It is a plea, softly spoken—a reminder that conservation is not the work of governments alone but of everyone who shares in the tapestry of life.



*Nilgiris: A Shared Wilderness* is not just watched—it is felt. It is the leap of a leopard cub, the hush of mist over blue mountains, the resilience of rivers  flowers, the echo of folklore in modern times. It is, at heart, a story of fragility hope, of interdependence  wonder.

For those who love the wild whispers of the earth, this is not just a film—it is an invitation to listen.



✍ **L Yajurvedha,**
**Assistant Professor**
**Department of English**
**VEIT Degree College**



© 2025 - VIJAYA GROUP OF INSTITUTIONS

# ಉದಾರಚರಿತರು

## ಆದರ್ಶ ಬದುಕಿನ ರೂವಾರಿ



ತನ್ನ ಕಾಲ ಮೇಲೆ ತಾನು ನಿಂತು ಸಮಾಜಕ್ಕೆ ಆದರ್ಶನಾಗಬೇಕೆಂದು ಹಳ್ಳಿಯಿಂದ ಬೆಂಗಳೂರಿಗೆ ಬಂದ ಆ ಯುವಕ, ತನ್ನ ಕನಸನ್ನು ನನಸು ಮಾಡಿಕೊಳ್ಳುವ ನಿಟ್ಟಿನಲ್ಲಿ ಸಾಕಷ್ಟು ಶ್ರಮ ವಹಿಸಿ ಒಂದು ಶಾಲೆಯನ್ನು ಆರಂಭಿಸಿದ. ಅನೇಕ ಕಷ್ಟಗಳನ್ನು ಅನುಭವಿಸಿ ಆರಂಭಿಸಿದ ಶಾಲೆಯನ್ನು ವ್ಯವಸ್ಥಿತವಾಗಿ ನಡೆಸಲು ಬೇಕಾದ ಆರ್ಥಿಕ ಸೌಲಭ್ಯ ಇರಲಿಲ್ಲ. ವಿದ್ಯಾರ್ಥಿಗಳಿಂದ ತಿಂಗಳಿಗೆ ಪಡೆಯುತ್ತಿದ್ದ ಶುಲ್ಕವು ಶಾಲೆಯ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಹೀಗಾಗಿ ಬೇರೆ ಕಡೆಯಿಂದ ಆರ್ಥಿಕ ಸೌಲಭ್ಯ ಪಡೆಯಲು ಮುಂದಾದರು. ಆ ಸಂದರ್ಭದಲ್ಲಿ ಶಾಲೆಯ ಬೋರ್ಡ್ ಬರೆಸಲು 75 ಪೈಸೆ ನೀಡುವಂತೆ ದಾನಿ ಒಬ್ಬರನ್ನು ಕೇಳಿದಾಗ, ಅವರು "ಬೋರ್ಡ್ ಬರಿಸಲೇ ನೀನು ಇಷ್ಟೊಂದು ಕಷ್ಟ ಪಡುತ್ತಿರುವೆ. ಅದು ಹೇಗೆ ನೀನು ಶಾಲೆಯನ್ನು ನಡೆಸುವೆ?" ಎಂದು ಹೀಯಾಳಿಸಿದ್ದರಂತೆ. ಅಂದೇ ಆ ವ್ಯಕ್ತಿ ವಂತಿಗೆಯನ್ನು ಪಡೆಯದೇ ಸಂಸ್ಥೆಯನ್ನು ಮುನ್ನಡೆಸುವ ದಿಟ್ಟ ನಿರ್ಧಾರವನ್ನು ಕೈಗೊಂಡರು. ಅದನ್ನು ಒಂದು ವ್ರತದಂತೆ ನಿರಂತರವಾಗಿ ನಿರ್ವಹಿಸಿ ಅರವತ್ತು ವರ್ಷಗಳ ಕಾಲ ಸಂಸ್ಥೆಯನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದ ಧೀಮಂತ ಚೇತನ ಶ್ರೀ ಕೆ. ಎಸ್ ಚಂದ್ರಶೇಖರಯ್ಯನವರು.

ಶಿಕ್ಷಣ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿ ಕರ್ನಾಟಕ ರಾಜ್ಯದಾದ್ಯಂತ ಮನೆಮಾತಾದ ವಿಜಯ ಶಿಕ್ಷಣ ಸಂಸ್ಥೆಯ ರೂವಾರಿ, ಶಿಕ್ಷಣ ಭೀಷ್ಮ ಶ್ರೀ ಕೆ ಎಸ್ ಚಂದ್ರಶೇಖರಯ್ಯನವರ ಜೀವನ ಸಾಧನೆಗಳು ಇಂದಿನ ಯುವ ಜನಾಂಗಕ್ಕೆ ಮಾದರಿಯಾಗಿವೆ.

1956 ರಲ್ಲಿ ಪ್ರಾರಂಭಗೊಂಡ ವಿಜಯ ವಿದ್ಯಾಸಂಸ್ಥೆಯ ಸ್ಥಾಪಕರಾದ ಚಂದ್ರಶೇಖರಯ್ಯನವರು ತಮ್ಮ ಜೀವನದ ಕೊನೆಯವರೆಗೂ ತಮ್ಮ ಸ್ವಂತ ಶಕ್ತಿಯಿಂದ ಸಂಸ್ಥೆಯನ್ನು ಬೆಳೆಸಿಕೊಂಡು ಬಂದರು. ನೂರಾರು ಜನಕ್ಕೆ ಉದ್ಯೋಗ ನೀಡಿ ಅನ್ನದಾತರಾದರು. ಸಾವಿರಾರು ವಿದ್ಯಾರ್ಥಿಗಳ ಕನಸನ್ನು ನನಸು ಮಾಡಲು ಅನೇಕ ಹೊಸ ಹೊಸ ಯೋಜನೆಗಳನ್ನು ರೂಪಿಸಿ, ವಿದ್ಯಾರ್ಥಿಗಳಿಗೆ ಕೇವಲ ವಿದ್ಯೆಯನ್ನು ಮಾತ್ರವಲ್ಲ, ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಸಹಾಯ- ಸಹಕಾರ ನೀಡಿದರು. ತಮ್ಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಯಾವುದೇ ಉದ್ಯೋಗಿಯು ತನ್ನ ಭವಿಷ್ಯದ ಬಗ್ಗೆ ಚಿಂತಿಸಬಾರದು ಎಂಬ ಮುಂದಾಲೋಚನೆಯನ್ನು ಹೊಂದಿದ್ದ ಚಂದ್ರಶೇಖರಯ್ಯನವರು ಪ್ರತಿಯೊಬ್ಬ ಉದ್ಯೋಗಿಯ ಹಿತ ಚಿಂತಕರಾಗಿದ್ದರು.

ಒಮ್ಮೆ ಒಬ್ಬ ನಾಲ್ಕನೇ ದರ್ಜೆಯ ನೌಕರರು ಸಂಸ್ಥೆಯ ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಂಡಾಗ ಅದನ್ನು ಸೂಕ್ಷ್ಮವಾಗಿ ನಿರ್ವಹಿಸಿ ಅವನ ಕುಟುಂಬಕ್ಕೆ ಯಾವುದೇ ರೀತಿಯ ತೊಂದರೆ ಆಗದಂತೆ ಸರಕಾರದಿಂದ ಧನ ಸಹಾಯ ಸಿಗುವಂತೆ ನೋಡಿಕೊಂಡುದು ಚಂದ್ರಶೇಖರಯ್ಯನವರ ಉನ್ನತ ಗುಣಕ್ಕೆ ಒಂದು ಉದಾಹರಣೆ.

ಸಂಸ್ಥೆ ಸರ್ಕಾರದ ಅನುದಾನದಲ್ಲಿ ನಡೆಯುತ್ತಿದ್ದರೂ ಅನೇಕ ಬಾರಿ ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ಶಿಕ್ಷಕರ ನೇಮಕಾತಿ ಆಗುವುದು ತಡವಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಿರಲಿ ಎಂದು ಸಂಸ್ಥೆಯ ಖರ್ಚಿನಲ್ಲಿಯೇ ಶಿಕ್ಷಕರನ್ನು ನೇಮಿಸಿ ವಿದ್ಯಾರ್ಥಿಗಳ ಹಿತಾಕಾಂಕ್ಷೆಯನ್ನು ಕಾಪಾಡುತ್ತಿದ್ದರು. ಮುಂದೆ ಸರ್ಕಾರದಿಂದ ಹೊಸ ಶಿಕ್ಷಕರ ನೇಮಕವಾದಾಗ ತಾವು ಖಾಸಗಿಯಾಗಿ ನೇಮಿಸಿದ್ದ ಶಿಕ್ಷಕರಿಗೆ ಪರ್ಯಾಯ ಉದ್ಯೋಗವನ್ನು ಕಲ್ಪಿಸಿ ಅವರ ಭವಿಷ್ಯವನ್ನು ಭದ್ರ ಪಡಿಸುತ್ತಿದ್ದರು.



ಸರ್ಕಾರದ ನಿಯಮದಂತೆ ಅನುದಾನ ರಹಿತ ಪಿ ಯು ಕಾಲೇಜನ್ನು ಆರಂಭಿಸಿದಾಗ ಅಲ್ಲ ಸಮಾಜದ ಮತ್ತು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿ ಇಟ್ಟುಕೊಂಡು ಅಂದಿನ ಕಾಲದಲ್ಲಿಯೇ ಅತ್ಯಾಧುನಿಕ ವಾಚನಾಲಯ, ಪ್ರಯೋಗಾಲಯಗಳನ್ನು ನಿರ್ಮಿಸಿ ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ವಾತಾವರಣವನ್ನು ಕಲ್ಪಿಸಿ ಕೊಟ್ಟದು ಚಂದ್ರಶೇಖರಯ್ಯನವರ ವಿಶಿಷ್ಟತೆ.

ಸಂಸ್ಥೆಯಲ್ಲಿ ಕೆಲಸ ಮಾಡುವ ಎಲ್ಲಾ ಸಿಬ್ಬಂದಿಯನ್ನು ತಮ್ಮ ಮನೆ ಮಂದಿಯಂತೆ ಪರಿಗಣಿಸಿ ಎಲ್ಲರ ಕುಶಲ ಕ್ಷೇಮಗಳಿಗೆ ಕಾರಣರಾದ ಚಂದ್ರಶೇಖರಯ್ಯನವರು ದೈಹಿಕವಾಗಿ ಇಂದು ನಮ್ಮೊಂದಿಗಿಲ್ಲದಿದ್ದರೂ ಮಾನಸಿಕವಾಗಿ ಯಾವಾಗಲೂ ನಮ್ಮ ಜೊತೆಯಲ್ಲಿ ಇರುತ್ತಾರೆ.



✍ **ಕುಮಾರಿ ಸಿ ವಿ ವೈಷ್ಣವಿ ರಾವ್,**
**ಬಿ. ಕಾಂ ಮೊದಲನೇ ವರ್ಷ**
**ವಿ ಇ ಐ ಟಿ ಪದವಿ ಕಾಲೇಜು,**


© 2025 - VIJAYA GROUP OF INSTITUTIONS

# ವಿಶ್ವ ಪಾರಂಪರಿಕ ತಾಣ – ಐಹೊಳೆ



ಐಹೊಳೆ ಕರ್ನಾಟಕದ ಬಾಗಲಕೋಟ ಜಿಲ್ಲೆಯಲ್ಲಿದೆ. ಹಿಂದು ಮತ್ತು ದ್ರಾವಿಡ ದೇವಾಲಯ ವಾಸ್ತು ಶಿಲ್ಪದ ತೊಟ್ಟಿಲು ಎಂದು ಕರೆಯಲ್ಪಡುತ್ತದೆ. ಐಹೊಳೆಯ ಪ್ರಮುಖ ದೇವಾಲಯಗಳಲ್ಲಿ ಒಂದಾದ ದುರ್ಗಾದೇವಸ್ಥಾನ ಕೋಟೆಯ ದೇವಾಲಯ ಎಂಬ ಅರ್ಥದಿಂದ ಗುರುತಿಸಿಕೊಂಡಿದೆ.

ಇದು ವಿಷ್ಣುವಿಗೆ ಸಮರ್ಪಿತವಾದ ದೇವಾಲಯ. ಇದನ್ನು ಕ್ರಿಸ್ತಶಕ 6ನೇ ಶತಮಾನದ ಅಂತ್ಯದಲ್ಲಿ ನಿರ್ಮಾಣ ಮಾಡಲಾಯಿತು. ಇಲ್ಲಿ ಲಾಡ್ ಖಾನ್ ಎಂಬ ದೇವಾಲಯವು ಇದೆ. ಇದು ಪಂಚಾಯತನ ಸಭಾಂಗಣದ ರೀತಿಯಲ್ಲಿ ನಿರ್ಮಿತವಾಗಿದೆ. ಕಿಟಕಿಗಳನ್ನು ಉತ್ತರ ಶೈಲಿಯಲ್ಲಿ ಜಾಲರಿ ಕೆಲಸದಿಂದ ತುಂಬಿಸಲಾಗಿದೆ. ಗರ್ಭಗುಡಿಯನ್ನು ಹಿಂಭಾಗದ ಗೋಡೆಯ ವಿರುದ್ಧ ನಿರ್ಮಿಸಲಾಗಿದೆ ಮತ್ತು ಮುಖ್ಯ ದೇವಾಲಯವು ನಂದಿಯೊಂದಿಗೆ ಶಿವಲಿಂಗವನ್ನು ಹೊಂದಿದೆ. ಸಭಾಂಗಣದ ಮಧ್ಯಭಾಗದ ಮೇಲೆ ಗರ್ಭಗುಡಿಗೆ ಎದುರಾಗಿ ಹೊರಗಿನ ಗೋಡೆಗಳ ಮೇಲೆ ಕೆತ್ತಿದ ಚಿತ್ರಗಳನ್ನು ಹೊಂದಿರುವ ಎರಡನೆಯ ಸಣ್ಣ ಗರ್ಭಗುಡಿ ಇದೆ.

ಕ್ರಿ.ಶ 450ರ ಸುಮಾರಿಗೆ ನಿರ್ಮಿಸಲಾದ ಈ ದೇವಾಲಯವು ತನ್ನ ನಿವಾಸವಾಗಿ ಪರಿವರ್ತಿಸಿದ ಮುಸ್ಲಿಂ ರಾಜಕುಮಾರನಿಂದ ಈ ಹೆಸರನ್ನು ಪಡೆದುಕೊಂಡಿದೆ. ಮೇಗುತಿ ದೇವಾಲಯವನ್ನು ಕ್ರಿಸ್ತಶಕ 634 ರಲ್ಲಿ ಒಂದು ಸಣ್ಣ ಬೆಟ್ಟದ ಮೇಲೆ ನಿರ್ಮಿಸಲಾಯಿತು. ಇದು ಐಹೊಳೆಯಲ್ಲಿರುವ ಏಕೈಕ ಹಳೆಯ ಸ್ಮಾರಕ. ಈ ದೇವಾಲಯವು ದ್ರಾವಿಡ ಶೈಲಿಯ ವಾಸ್ತುಶಿಲ್ಪದ ಆರಂಭಿಕ ಬೆಳವಣಿಗೆಗೆ ಪ್ರಮುಖ ಪುರಾವೆಗಳನ್ನು ಒದಗಿಸುತ್ತದೆ.

ರಾವಣ ಫಡಿ ಗುಹೆಯು 6ನೇ ಶತಮಾನಕ್ಕೆ ಸೇರಿದ್ದಾಗಿದೆ. ಈ ಗುಹಾ ದೇವಾಲಯದ ಗರ್ಭಗುಡಿಯು ಬಾದಾಮಿಯ ಗುಹಾ ದೇವಾಲಯಗಳಿಗಿಂತ ದೊಡ್ಡದಾಗಿದೆ ಮತ್ತು ಇಲ್ಲಿ ತ್ರಿವಳಿ ಪ್ರವೇಶ ದ್ವಾರವಿದೆ . ಇದು ಕೆತ್ತಿದ ಫಲಕಗಳಿಂದ ಸುತ್ತುವರೆದಿರುವ ಒಂದು ಮುಖ ಮಂಟಪವನ್ನು ಹೊಂದಿದೆ. ಇಲ್ಲಿರುವ ಮಹಷಾಸುರ ಮರ್ಧಿನಿ, ಗಣೇಶ ಮತ್ತು ಸಪ್ತ ಮಾತೃಕೆಯರ ಶಿಲ್ಪಗಳು ಮತ್ತು ಮಹಾನ್ ನೃತ್ಯ, ಶಿವಲಿಂಗ ಮತ್ತು ಗರ್ಭಗುಡಿಯೊಳಗಿನ ಶಿವಲಿಂಗವು ದೇವಾಲಯದ ಸೊಬಗನ್ನು ಹೆಚ್ಚಿಸಿವೆ. ಹಾಗೆ ಇಲ್ಲಿ ಚಕ್ರಗುಡಿ, ಅಂಬಿಗರ ಗುಡಿ, ತ್ರಯಂಬಕೇಶ್ವರ ದೇವಾಲಯ ಮುಂತಾದ ದೇವಾಲಯಗಳಿವೆ. ಜ್ಯೋತಿರ್ಲಿಂಗ ದೇವಾಲಯಗಳು ಕೂಡ ಇಲ್ಲಿನ ಪ್ರಮುಖ ಆಕರ್ಷಣೆ.

**ಮಲ್ಲಿಕಾರ್ಜುನ ದೇವಾಲಯಗಳ ಸಂಕೀರ್ಣ** : ಇಲ್ಲಿನ ಮುಖ್ಯ ದೇವಾಲಯವು ಉಳಿದ ಸಣ್ಣ ದೇವಾಲಯಗಳಿಗೆ ಸಂಪರ್ಕ ಕಲ್ಪಿಸುತ್ತದೆ. ರಾಮಲಿಂಗೇಶ್ವರ ದೇವಾಲಯ ಸಂಕೀರ್ಣವು ಐದು ದೇವಾಲಯಗಳನ್ನು ಹೊಂದಿದೆ. ತ್ರಯಂಬಕೇಶ್ವರ ದೇವಾಲಯ ಸಂಕೀರ್ಣವು ಸಹ ಐದು ದೇವಾಲಯಗಳನ್ನು ಹೊಂದಿದೆ. ಕುಂಟಿ ಗುಡಿ ಸಂಕೀರ್ಣವು ನಾಲ್ಕು ದೇವಾಲಯಗಳನ್ನು ಹೊಂದಿದೆ.

(ಮುಂದುವರಿಯುವುದು)



✍ **ಕುಮಾರಿ ಲಕ್ಷ್ಮಿ ಜೆ ಶೇಟ್,**
**ದ್ವಿತೀಯ ಪಿಯು ಎ ವಿಭಾಗ,**
**ವಿಜಯ ಸಂಯುಕ್ತ ಪದವಿ ಪೂರ್ವ ಕಾಲೇಜು.**


© 2025 - VIJAYA GROUP OF INSTITUTIONS

# ಸಂಸ್ಕೃತ ಸೌರಭ

## ಶ್ರೀ ಕೃಷ್ಣ

**ಆಧ್ಯಾತ್ಮ ಬಂಧುಗಳೇ,**
ಶ್ರಾವಣ ಮಾಸದಲ್ಲಿ ವಿಶೇಷವಾಗಿ ನಾವು ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸುತ್ತೇವೆ. ಶ್ರೀ ಕೃಷ್ಣ ಪರಮಾತ್ಮನು ಶ್ರಾವಣ ಮಾಸದ ಕೃಷ್ಣ ಪಕ್ಷದ ರೋಹಿಣಿ ನಕ್ಷತ್ರದಿಂದ ಕೂಡಿರುವ ಅಷ್ಟಮೀ ತಿಥಿಯಂದು ಅರ್ಧ ರಾತ್ರಿಯಲ್ಲಿ ದೇವಕಿ ಮತ್ತು ವಸುದೇವರಿಂದ ಜನ್ಮವನ್ನು ಪಡೆದಿದ್ದಾನೆ. "कर्षतीति कृष्णः" ಎನ್ನುವ ನಿಷ್ಪತ್ತಿಯಿಂದ ಎಲ್ಲರ ಮನಸ್ಸನ್ನು ಆಕರ್ಷಿಸುವ ವ್ಯಕ್ತಿತ್ವ ಶ್ರೀಕೃಷ್ಣನದ್ದು. ಬಾಲಕನಾಗಿದ್ದಾಗ ತನ್ನ ಮುದ್ದು ಕೃಷ್ಣನ ಚೇಷ್ಟೆಗಳಿಂದ ಹಾಗೂ ದೊಡ್ಡವನಾದ ಮೇಲೆ ತನ್ನ ವ್ಯಕ್ತಿತ್ವದಿಂದ ಇಡೀ ಲೋಕವನ್ನೇ ಆಕರ್ಷಿಸಿದ್ದಾನೆ. ಇಂತಹ ಕೃಷ್ಣನು ಮುಖ್ಯವಾಗಿ ವಾಸಿಷ್ಠ ಕೃಷ್ಣ ಮತ್ತು ಯಾದವ ಕೃಷ್ಣ ಎಂದು ಪ್ರಸಿದ್ಧನಾಗಿದ್ದಾನೆ. ವಾಸಿಷ್ಠ ಕೃಷ್ಣನಾಗಿ ವಸಿಷ್ಠ ಋಷಿಗಳ ವಂಶದಲ್ಲಿ ಸತ್ಯವತಿ ಮತ್ತು ಪರಾಶರ ಪುತ್ರನಾಗಿ ವೇದವ್ಯಾಸ ರೂಪದಿಂದ ಅವತರಿಸಿ ಇಡೀ ಮನುಕುಲಕ್ಕೆ ಜ್ಞಾನವನ್ನು ನೀಡಿದ್ದಾನೆ. ಈ ಅವತಾರದಲ್ಲಿ ವೇದಾಂತ ಶಾಸ್ತ್ರಕ್ಕೆ ಮೂಲಗಳಾದಂತಹ ಬ್ರಹ್ಮಸೂತ್ರಗಳನ್ನು, ಇತಿಹಾಸ ಗ್ರಂಥವಾದ ಮಹಾಭಾರತವನ್ನು, ಭಾಗವತಾದಿ 18 ಪುರಾಣಗಳನ್ನು, ಮತ್ತು ಅನಂತವಾದ ವೇದ ರಾಶಿಯನ್ನು ಋಗ್ವೇದ ಆದಿ ವೇದಗಳ ವಿಭಾಗವನ್ನು ಮಾಡುವ ಮೂಲಕ ಪ್ರಪಂಚಕ್ಕೆ ಜ್ಞಾನವನ್ನು ನೀಡಿದ್ದಾನೆ.
ಯಾದವ ಕೃಷ್ಣನಾಗಿ ಯದು ಕುಲದಲ್ಲಿ ಜನಿಸಿ ಜ್ಞಾನ ಕಾರ್ಯವನ್ನು ಮತ್ತು ಬಲಕಾರ್ಯವನ್ನು ಎರಡನ್ನು ಪ್ರದರ್ಶಿಸಿದ್ದಾನೆ. ಮುಖ್ಯವಾಗಿ ಕೃಷ್ಣನು ಈ ಅವತಾರದಲ್ಲಿ ದೈತ್ಯ ಸ್ವರೂಪಿಗಳಾದ ಜರಾಸಂಧ, ಕಂಸ, ನರಕಾಸುರ ಇತ್ಯಾದಿ ರಾಕ್ಷಸರ ಸಂಹಾರವನ್ನು ಕೈಗೊಂಡಿದ್ದಾನೆ. ಇದರಿಂದ ಭೂಮಿಯ ಭಾರವನ್ನು ಕಡಿಮೆ ಮಾಡಿದ್ದಾನೆ. ನರಕಾಸುರನು ಬಂಧಿಸಿಟ್ಟಿದ್ದ 16 ಸಾವಿರ ಕನ್ಯೆಯರನ್ನು ಬಂಧನದಿಂದ ಮುಕ್ತಿಗೊಳಿಸಿದ್ದಾನೆ. ಜರಾಸಂಧನನ್ನು 18 ಬಾರಿ ಅವನೊಂದಿಗೆ ಯುದ್ಧವನ್ನು ಮಾಡುವ ಮೂಲಕ ಅವನ ಸೇನೆಯನ್ನು ಪರಾಜಿತಗೊಳಿಸಿದ್ದಾನೆ. ಆದ್ದರಿಂದ ಇಂಥ ಕೃಷ್ಣನಿಗೆ ನಾವು ಧನ್ಯತಾಭಾವನೆಯನ್ನು ಸಮರ್ಪಿಸುವುದಕ್ಕಾಗಿ ಕೃಷ್ಣಾಷ್ಟಮಿಯ ರಾತ್ರಿಯ ವೇಳೆಯಲ್ಲಿ ಈ ಕೆಳಗಿನ ಶ್ಲೋಕವನ್ನು ಭಕ್ತಿಯಿಂದ ಹೇಳುವ ಮೂಲಕ ಅರ್ಘ್ಯ ಪ್ರದಾನವನ್ನು ನಾವು ಮಾಡುತ್ತೇವೆ. ಆ ಶ್ಲೋಕವು ಹೀಗಿದೆ ----

जातः कंसवधार्थाय भूभार हरणाय च।
कौरवाणां विनाशाय दैत्यानां निधनाय च॥
पाण्डवानां हितार्थाय धर्म संस्थापनाय च।
गृहाणार्घ्यं मया दत्तं देवक्या सहितो हरे॥

ದುಷ್ಟರಾದ ಜರಾಸಂಧ ಕಂಸಾದಿಗಳನ್ನು ಸಂಹಾರ ಮಾಡುವ ಮೂಲಕ ಕೃಷ್ಣನು ಬಲ ಕಾರ್ಯವನ್ನು ಪ್ರದರ್ಶಿಸಿದ್ದಾನೆ. ಅರ್ಜುನನು ಯುದ್ಧದಿಂದ ವಿಮುಖನಾದಾಗ ಅವನನ್ನು ಯುದ್ಧಕ್ಕಾಗಿ ಪ್ರೇರೇಪಿಸುವುದಕ್ಕಾಗಿ ಇಡೀ ಭಗವದ್ಗೀತೆಯನ್ನು ಮನುಕುಲಕ್ಕೆ ಉಪದೇಶಿಸಿದ್ದಾನೆ.

### ಶಬ್ದ ಕೌಸ್ತುಭ

ಸಂಸ್ಕೃತ ಭಾಷೆಯಲ್ಲಿ "दोषः" ಎನ್ನುವ ಶಬ್ದಕ್ಕೆ "ತಪ್ಪು" ಎನ್ನುವ ಅರ್ಥವಿದೆ. ಹಾಗೆಯೇ ಬಾಹುಗಳು ಎನ್ನುವ ಅರ್ಥವೂ ಇದೆ.
"दोषः दोषौ दोषाः" ಈ ರೀತಿಯಾಗಿ ಶಬ್ದವನ್ನು ನಡೆಸಿದಾಗ "ತಪ್ಪು" ಎನ್ನುವ ಅರ್ಥವನ್ನು ನಾವು ಸ್ವೀಕರಿಸಬೇಕು."दोः दोषौ दोषः" ಎಂದು ಈ ರೀತಿಯಾಗಿ ಶಬ್ದವನ್ನು ನಡೆಸಿದಾಗ "ಬಾಹುಗಳು" ಎನ್ನುವ ಅರ್ಥವು ಸಿಗುತ್ತದೆ. ಇದಕ್ಕೆ ಸಂವಾದಿಯಾಗಿ ಈ ಶ್ಲೋಕವು ನಮಗೆ ದೊರೆಯುತ್ತದೆ.-

अस्मासु दोषौ वर्तेते दोषः सन्ति च रावणे।
दोषलेशोऽपि नास्त्यत्र चिन्त्यताम् अर्थ साधुता॥

ಈ ಶ್ಲೋಕದ ಅರ್ಥವು ಹೀಗಿದೆ. ನಮ್ಮಲ್ಲಿ ಸಾಮಾನ್ಯವಾಗಿ ಮನುಷ್ಯರಲ್ಲಿ ಎರಡು ಭುಜಗಳು ಇರುತ್ತವೆ. ಆದರೆ ರಾವಣನಲ್ಲಿ ಅನೇಕ ಭುಜಗಳಿವೆ. "ದೋಷ" ಎನ್ನುವ ಶಬ್ದದಲ್ಲಿ ಯಾವ ತಪ್ಪು ಇಲ್ಲ. ಇದು ಈ ಶಬ್ದದ ವೈಶಿಷ್ಟ್ಯ ಎಂದು. ಇಂತಹ ಅನೇಕ ಶಬ್ದಗಳು ನಮ್ಮ ಸಂಸ್ಕೃತ ಭಾಷೆಯಲ್ಲಿ ಸಿಗುತ್ತವೆ. ( ಈ ವಿಷಯವನ್ನು ೨ನೇ ತರಗತಿಯ ಪಠ್ಯಪುಸ್ತಕದಿಂದ ಸ್ವೀಕರಿಸಲಾಗಿದೆ ).

ಇದರಿಂದ ಅರ್ಜುನನು ತಾನು ಕ್ಷತ್ರಿಯನು ತನ್ನ ಕರ್ತವ್ಯವು ಯುದ್ಧವನ್ನು ಮಾಡುವುದು ಎಂದು ತಿಳಿದು ಯುದ್ಧದಲ್ಲಿ ಜಯವನ್ನು ಸಂಪಾದಿಸಿದ್ದಾನೆ. "कर्मण्येवाधिकारस्ते मा फलेषु कदाचन" । ಇಂತಹ ಅನೇಕ ವಿಧವಾದ ಜ್ಞಾನೋಪದೇಶವನ್ನು ಮಾಡುವ ಮೂಲಕ ಮಾನವನು ತನ್ನ ಕರ್ತವ್ಯವನ್ನು ಶ್ರದ್ಧಾ ಮತ್ತು ಭಕ್ತಿಗಳಿಂದ ಮಾಡಬೇಕೆನ್ನುವುದನ್ನು ತಿಳಿಸಿಕೊಟ್ಟಿದ್ದಾನೆ. ಸಜ್ಜನರಾದ ಪಾಂಡವರಿಗೆ ಯುದ್ಧದಲ್ಲಿ ಸರಿಯಾದ ಮಾರ್ಗದರ್ಶನವನ್ನು ನೀಡುವ ಮೂಲಕ ಸತ್ಯಕ್ಕೆ ಮತ್ತು ಧರ್ಮಕ್ಕೆ ಜಯವಿದೆ ಎಂದು ತೋರಿಸಿಕೊಟ್ಟಿದ್ದಾನೆ. ಕಣಿಕ ನೀತಿಯನ್ನು ಅನುಸರಿಸಿದ ಕೌರವ ಕುಲದಲ್ಲಿ ದುಷ್ಟನಾದ ದುರ್ಯೋಧನನು ನಾಶವಾಗಲು ಕಾರಣವಾಗಿದ್ದಾನೆ. ಅನೇಕ ಕಷ್ಟಕರವಾದ ಪ್ರಸಂಗಗಳಲ್ಲಿ ಉದ್ಧವನಿಗೆ, ಗೋಪಿಯರಿಗೆ ಸನ್ಮಾರ್ಗವನ್ನು ಉಪದೇಶ ಮಾಡುವ ಮೂಲಕ ತಾನು ನಿಮ್ಮೊಂದಿಗಿದ್ದೇನೆ ಎನ್ನುವ ವಿಶ್ವಾಸವನ್ನು ಮೂಡಿಸಿದ್ದಾನೆ. ಧರ್ಮವನ್ನು ಮರುಸ್ಥಾಪನೆ ಮಾಡಿ ಪ್ರಪಂಚಕ್ಕೆಲ್ಲಾ ಅನುಗ್ರಹಿಸಿದ ಕೃಷ್ಣನನ್ನು ಯಾವಾಗಲೂ ಗೆಳೆಯನಂತೆ ನಮ್ಮೊಂದಿಗೆ ಇರುವವನನ್ನು ದ್ವಾಪರ ಯುಗ ಮತ್ತು ಕಲಿಯುಗದ ಈ ಮಧ್ಯಕಾಲದಲ್ಲಿ ಅವತರಿಸಿದ ಇಂತಹ ಕೃಷ್ಣನನ್ನು ನಾವು ನಿರಂತರ ಅವನ ನಾಮಸ್ಮರಣೆಯನ್ನು ಮಾಡುವ ಮೂಲಕ ಹಾಗೂ ಅವನಿಗೆ ಪೂಜೆಯನ್ನು ಸಲ್ಲಿಸುವ ಮೂಲಕ ನೆನೆಯೋಣವಲ್ಲವೇ. ಹಾಗೆಯೇ ಈ ಸಂದರ್ಭದಲ್ಲಿ ಎಲ್ಲರಿಗೂ ಇಷ್ಟವಾದ ಚಕ್ಕುಲಿ, ಉಂಡೆ, ಮೊದಲಾದ ಭಕ್ಷ್ಯಗಳನ್ನು ಅವನಿಗೆ ಸಮರ್ಪಣೆ ಮಾಡುವ ಮೂಲಕ ಇವುಗಳನ್ನು ನಾವು ಸವಿದು ಆನಂದಿಸೋಣವಲ್ಲವೇ.



✍ ಟಿ ರಾಘವೇಂದ್ರ.
ಸಹಾಯಕ ಪ್ರಾಧ್ಯಾಪಕರು,
ವಿ ಈ ಐ ಟಿ ಪದವಿ ಕಾಲೇಜು


© 2025 - VIJAYA GROUP OF INSTITUTIONS

# LIFE SKILLS

## ಹೊಂಗಿರಣ



### ತೋಳ ಬಂತು ತೋಳ

ಒಂದು ಹಳ್ಳಿಯಲ್ಲಿ ಒಬ್ಬ ಬಾಲಕನಿದ್ದ. ಅವನು ಪ್ರತಿನಿತ್ಯ ತನ್ನ ಮನೆಯಿಂದ ಸ್ವಲ್ಪ ದೂರದಲ್ಲಿರುವ ಬಯಲು ಪ್ರದೇಶಕ್ಕೆ ಹೋಗಿ ಕುರಿ ಮೇಯಿಸುವ ಕೆಲಸವನ್ನು ಮಾಡುತ್ತಿದ್ದ. ಕುರಿಗಳನ್ನು ಮೇಯಿಸುವ ಸಮಯದಲ್ಲಿ ತೋಳ ಬಂದರೆ ಜೋರಾಗಿ ನಮ್ಮನ್ನು ಕರೆ ಎಂದು ಗ್ರಾಮಸ್ಥರು ಹೇಳಿದ್ದರು. ಹುಡುಗನು ಗ್ರಾಮಸ್ಥರು ಹೇಳಿದ್ದನ್ನು ಪರೀಕ್ಷಿಸಲು ಸುಮ್ಮನೆ "ಅಯ್ಯೋ ಯಾರಾದ್ರೂ ಬನ್ನಿ, ಕುರಿ ಹಿಡಿಯಲು ತೋಳ ಬಂತು" ಎಂದು ಜೋರಾಗಿ ಕೂಗಿಕೊಂಡ. ಊರವರೆಲ್ಲ ಓಡೋಡಿ ಬಂದು ಎಲ್ಲಿ ಹುಡುಕಿದರೂ ತೋಳ ಕಾಣಿಸಲಿಲ್ಲ. ಊರವರು ಮರಳಿ ಮನೆಗೆ ಹೋದರು.

ಬಾಲಕನಿಗೆ ಇದರಿಂದ ಖುಷಿಯಾಯ್ತು.ಮತ್ತೊಂದು ದಿನ ಇದೇ ರೀತಿ ಮಾಡಿದ. ತೋಳ ತೋಳ ಎಂದು ಕೂಗಿಕೊಂಡು ಓಡಿದ. ಊರವರೆಲ್ಲ ದೊಣ್ಣೆ ಎತ್ತಿಕೊಂಡು ಬಂದರು. ಎಲ್ಲೂ ತೋಳ ಕಾಣಿಸಲಿಲ್ಲ. ಹುಡುಗ ಸುಳ್ಳು ಹೇಳಿದ್ದಾನೆ ಎಂದು ಮರಳಿ ಹೋದರು. ಮತ್ತೆ ಇನ್ನೊಂದು ದಿನವೂ ಹುಡುಗ ಇದೇ ರೀತಿ ಮಾಡಿದ. ಕೆಲವು ಗ್ರಾಮಸ್ಥರು ಬಂದು ಹುಡುಕಿದರು. ಎಲ್ಲೂ ಕಾಣಿಸಲಿಲ್ಲ. "ಮಾಡೋಕ್ಕೆನೂ ಕೆಲಸ ಇಲ್ಲ!" ಎಂದುಕೊಂಡು ಮನೆಗೆ ಹೋದರು.

ಅದಾದ ಬಳಿಕ ಒಂದು ದಿನ ಆ ಹುಡುಗ ಕುರಿ ಮೇಯಿಸ್ತಾ ಇದ್ದ. ಸಂಜೆಯಾಯಿತು. ವಾಪಸ್ ಕುರಿಗಳನ್ನು ದೊಡ್ಡಿಗೆ ಬಿಡೋಣ ಎಂದು ಮನೆ ಕಡೆ ಹೊರಟಾಗ ನಿಜವಾದ ತೋಳ ಕುರಿ ಮಂದೆ ಮೇಲೆ ದಾಳಿ ಮಾಡಿತು. ಭಯಗೊಂಡ ಹುಡುಗ "ತೋಳ ಬಂತು ತೋಳ" ಎಂದು ಕೂಗುತ್ತ ಹಳ್ಳಿಯತ್ತ ಓಡಿದ. ಆದರೆ, ಇವನು ಹಿಂದಿನಂತೆ ಸುಳ್ಳು ಹೇಳುತ್ತಿದ್ದಾನೆ ಎಂದು ಊರವರು ಬರಲೇ ಇಲ್ಲ. ತೋಳವು ಹಲವು ಕುರಿಗಳನ್ನು ತಿಂದಿತು. ಇದನ್ನು ನೋಡಿ ಹುಡುಗ ಅಳುತ್ತ ಕುಳಿತ.

ಆದ್ದರಿಂದ ನಾವು ಯಾವೊತ್ತೂ ಸುಳ್ಳು ಹೇಳಬಾರದು. ನಾವು ಹೇಳಿದ ಸುಳ್ಳನ್ನು ಒಂದು ಸಾರಿ ನಂಬಬಹುದು, ಎರಡು ಸಾರಿ ನಂಬಬಹುದು. ಆದರೆ ಪ್ರತಿ ಬಾರಿಯೂ ನಂಬುವುದಿಲ್ಲ. ಹಾಗಾಗಿ ನಮ್ಮ ಸುಳ್ಳು ನಮ್ಮನ್ನು ವಿನಾಶದತ್ತ ಕೊಂಡೊಯ್ಯುತ್ತದೆ. ಹಾಗಾಗಿ ನಾವು ಸತ್ಯವಂತರಾಗಿ ಬಾಳಲು ಪ್ರಯತ್ನಿಸಬೇಕು.



✍ ಜಾಹ್ನವಿ ಕೆ.
ಬಿ ಸಿ ಎ 3ನೇ ಸೆಮಿಸ್ಟರ್,
ವಿಇಐಟಿ ಪದವಿ ಕಾಲೇಜು.

## ಸೂಕ್ತಿಸುಧಾ



### ಬಹುತ್ವದ ಮಹತ್ವ

"ಯಾತ್ರಾಮಾತ್ರಪ್ರಸಿದ್ಧ್ಯರ್ಥಂ ಸ್ವೈಃ ಕರ್ಮಭಿರಗರ್ಹಿತೈಃ |
ಅಕ್ಲೇಶೇನ ಶರೀರಸ್ಯ ಕುರ್ವೀತ ಧನಸಂಚಯಮ್ || "

"ತನಗೆ ಯೋಗ್ಯವಾದ ಮತ್ತು ನಿಂದನೀಯವಲ್ಲದ ಕೆಲಸಗಳಿಂದ ಹಣವನ್ನು ಸಂಪಾದಿಸಬೇಕು. ನಿತ್ಯಜೀವನವನ್ನು ಸಾಗಿಸಲು ಅವಶ್ಯವಿದ್ದಷ್ಟು ಹಣ ಸಂಪಾದಿಸಿದರೆ ಸಾಕು. ಹಣಕ್ಕಾಗಿ ಶರೀರವನ್ನು ಅತಿಯಾಗಿ ದಂಡಿಸಬಾರದು."

ಮಾನವನಿಗೆ ಧರ್ಮ ಹಾಗೂ ಮೋಕ್ಷಗಳೆ ನಿಜವಾದ ಪುರುಷಾರ್ಥಗಳು. ಅವುಗಳ ಸಾಧನೆಗೆ ಶರೀರ ಅವಶ್ಯಕ. ಶರೀರನಿರ್ವಹಣೆಗಾಗಿ ಹಣ ಅವಶ್ಯಕ. ಆ ಹಣಕ್ಕಾಗಿ ದೇಹವನ್ನು ದುಡಿಸಬೇಕು. ಯಾವ ಬಗೆಯ ದುಡಿತ? ಕೃಷಿ, ವ್ಯಾಪಾರ, ಅಧ್ಯಾಪನ , ಸೇವೆ ಇವುಗಳಲ್ಲಿ ಯಾವುದನ್ನು ಮಾಡಲು ನೀನು ಯೋಗ್ಯತೆಯನ್ನು ಸಂಪಾದಿಸಿದ್ದೀಯೋ ಆ ಬಗೆಯ ದುಡಿತಕ್ಕೆ ಕೈಹಾಕು ಎನ್ನುತ್ತದೆ ಮನುಸ್ಮೃತಿ. **'ಅಗರ್ಹಿತೈಃ'** ಆ ದುಡಿತ ನಿಂದಾರ್ಹವಾಗಿರಬಾರದು. ಕಳ್ಳತನ, ವಂಚನೆ, ಹಿಂಸೆ ಮೊದಲಾದುವು ನಿಂದಿತವಾದವು.

ಈಗ ನಮ್ಮ ಜೀವನದ ಮೌಲ್ಯ ಬದಲಾವಣೆಯಾಗಿದೆ. ಸಂಪಾದನೆಯ ಮಾರ್ಗ ಯಾವುದಾದರೂ ಅಡ್ಡಿಯಿಲ್ಲ. ಕೆಟ್ಟ ಮತ್ತು ಒಳ್ಳೆಯ ಮಾರ್ಗವೆರಡರಲ್ಲೂ ನಮ್ಮದು ಒಂದೇ ರೀತಿಯ ಭಾವನೆ. ಲಾಭಕ್ಕಾಗಿ ವ್ಯಾಪಾರ.

ಯಾವ ಕ್ಷೇತ್ರದಲ್ಲಿ ಹೆಚ್ಚಿನ ಲಾಭ ಸಿಗುವುದೋ ಅಲ್ಲಿಗೇ ನಮ್ಮ ಪ್ರವೇಶ. ಆ ಕ್ಷೇತ್ರದ ಪರಿಚಯ, ಆ ಕ್ಷೇತ್ರಕ್ಕೆ ಬೇಕಾದ ಯೋಗ್ಯತೆ ಇಲ್ಲದಿದ್ದರೂ ಅಭ್ಯಾಸದಿಂದ ಮುಂದೆ ಪರಿಚಯವಾದೀತು, ಅಕಸ್ಮಾತ್ ಪರಿಚಯವಾಗದಿದ್ದರೂ ಏನೀಗ ? ಅಧಿಕಾರ ಮತ್ತು ಹಣ ನಿರಂತರವಾಗಿ ಒದಗುತ್ತಿದ್ದರೆ ಸಾಕು ಎಂಬ ಕ್ಷುದ್ರ ಚಿಂತನೆ ನಮ್ಮದು. ಒಂದು ಕಾಲಕ್ಕೆ ತನ್ನ ವ್ಯವಹಾರಕ್ಕಾಗಿ ನಿರ್ಮಿಸಿಕೊಂಡ ಹಣ,ಇಂದು ಅವನ ಆರಾಧ್ಯದೇವತೆಯಾಗಿದೆ.

ಶರೀರದ ಸೇವೆಗಾಗಿ ಧನ ಎಂದು ಮನು ಹೇಳಿದರೆ ಧನದ ಸಂಪಾದನೆಗಾಗಿಯೇ ಈ ಶರೀರ ಎಂದು ಇಂದಿನ ಜನರೆಲ್ಲಾ ತೀರ್ಮಾನಿಸಿದಂತಿದೆ, ಛೆ ಎಂಥಹಾ ದುರಂತ !



✍ ಶ್ರೀ ಪಿ. ಶ್ಯಾಮ್ ಪ್ರಸಾದ,
ಉಪನ್ಯಾಸಕರು,
ವಿಜಯ ಸಂಯುಕ್ತ ಪದವಿ ಪೂರ್ವ ಕಾಲೇಜು


© 2025 - VIJAYA GROUP OF INSTITUTIONS

VOICE OF VIJAYA
THE DIGITAL MAGAZINE
BI-MONTHLY
JULY – AUG – 2025
ISSUE - 30

# YOGA


## ಶ್ರೀ ಸತ್ತ್ವಯೋಗ

### ಪೂರ್ವೋತ್ತಾನಾಸನ

ಯೋಗ ದರ್ಶನದಲ್ಲಿ ಬೆನ್ನನ್ನು ಪಶ್ಚಿಮ, ನೆತ್ತಿಯನ್ನು ಉತ್ತರ, ಪಾದದ ಅಡಿ ದಕ್ಷಿಣ ಮತ್ತು ಶರೀರದ ಮುಂಭಾಗವನ್ನು ಪೂರ್ವವೆಂದು ತಿಳಿಸಲಾಗಿದೆ. ಶರೀರದ ಪೂರ್ವ ಭಾಗವು ಮೇಲೆ (ಉತ್ಥಾನ) ಬರುವುದರಿಂದ ಈ ಯೋಗಾಸನವನ್ನು ಪೂರ್ವೋತ್ಥಾನಾಸನ ಎಂದು ಕರೆಯಲಾಗಿದೆ.

**ಆಚರಿಸುವ ವಿಧಾನ :**

1. ಕುಳಿತು ಮಾಡುವ ಯೋಗಾಸನ ಸ್ಥಿತಿಯಿಂದ (ಚಿತ್ರ -1) ರೇಚಕ ಮಾಡುತ್ತಾ, ಎರಡೂ ಕೈಗಳನ್ನು ಹಸ್ತವು ಒಳ ಮುಖವಾಗಿರುವಂತೆ ಹಿಂದೆ ಇರಿಸಬೇಕು. (ಚಿತ್ರ - 2)
2. ಮತ್ತೊಮ್ಮೆ ದೀರ್ಘ ಪೂರಕ ಮಾಡಿ, ರೇಚಕ ಮಾಡುತ್ತಾ ನಿಧಾನವಾಗಿ (ಎರಡೂ ಹಸ್ತಗಳು ಮತ್ತು ಹಿಮ್ಮಡಿ ಮೇಲೆ ಭಾರ ಬೀಳುವಂತೆ) ಮೇಲಕ್ಕೆ ತರಬೇಕು.
3. ಪೂರ್ಣ ಪಾದವನ್ನು ನೆಲಕ್ಕೆ ತಾಗಿಸಲು ಪ್ರಯತ್ನಿಸಬೇಕು. (ಚಿತ್ರ - 3) ತಲೆಯನ್ನು ಹಿಂದಕ್ಕೆ ತರಬೇಕು.
4. ಇದು ಪೂರ್ಣ ಸ್ಥಿತಿ. ಈ ಸ್ಥಿತಿಯಲ್ಲಿ 5 - 6 ಬಾರಿ ಉಸಿರಾಡುತ್ತಾ ಹಾಗೆ ಇದ್ದು, ನಂತರ ಪೂರಕ ಮಾಡುತ್ತಾ ಹಿಂದೆ ಬರಬೇಕು. ಇದನ್ನು ವಿಪರೀತ ದಂಡಸನವೆಂದೂ ಕರೆಯಲಾಗಿದೆ.




**ಉಪಯೋಗ**

1. ಈ ಯೋಗಾಸನದಲ್ಲಿ ಮುಂಡಭಾಗವು ಅತಂತ್ರ ಸ್ಥಿತಿಯಿಂದ ಶ್ವಾಸ, ಜೀರ್ಣ ಮತ್ತು ವಿಸರ್ಜನಾಂಗಗಳು ಚೈತನ್ಯ ಪಡೆಯುವವು.
2. ಕೈ ಮತ್ತು ಭುಜಗಳು ಬಲಗೊಳ್ಳುವವು.
3. ನೆತ್ತಿಯಿಂದ ಪಾದದ ತುದಿಯವರೆಗೂ ಸೆಳೆತ, ಬಿಗಿತಗಳಿಂದ ರಕ್ತ ಸಂಚಾರ ಸುಗಮವಾಗುವುದು.
4. ಸರ್ವ ಗ್ರಂಥಿಗಳು (Endocrine glands) ಚೈತನ್ಯ ಪಡೆಯುವವು.



✍ ಯೋಗಾಚಾರ್ಯ ಬಾಳೇಕುಡಿಗೆ ಪರಮೇಶ್ವರ್,
ಶ್ರೀ ಸತ್ತ್ವ ಯೋಗ ಫೌಂಡೇಶನ್,
ಯೋಗ ಶಿಕ್ಷಕರು, ವಿಜಯ ವಿದ್ಯಾ ಸಂಸ್ಥೆ,
ಬೆಂಗಳೂರು


© 2025 - VIJAYA GROUP OF INSTITUTIONS

# ACHIEVERS

HEARTY CONGRATULATIONS TO THE ACHIEVERS




Heartfelt Congratulations to **Mr. Shankaracharya** for receiving the Certificate of Appreciation from the Department of Commerce, Bangalore University. Recognised for his outstanding contribution as a Member of the Board of Studies in Commerce, his role in designing the curriculum for I–IV Semester Commerce Programs (SEP 2024-25) has significantly enriched the quality and relevance of higher education.



We are delighted to share that **Ms. Sangeetha N**, has been honored with the Best Teacher Award by the Indian Talent Olympiad (ITO). This award is a recognition of her exceptional contribution towards student progress, her inspiring teaching methods, and her academic initiatives that have significantly enhanced the performance of our students. Her dedication, commitment, and passion for education have not only motivated students to excel but have also brought pride to our institution.


© 2025 - VIJAYA GROUP OF INSTITUTIONS

# ACHIEVERS

## HEARTY CONGRATULATIONS TO THE ACHIEVERS




### VARUNI B S

We are delighted to share that Varuni B S from II P.U 'E' has been selected to represent Karnataka State in the All Age-Group Acrobatic Gymnastics National Championship 2025-26

### NEHA V. KONSE

Congratulations to Neha V. Konse of Vijaya Composite PU College 2nd PU 'D' for her outstanding performance at the 5th Karnataka State Open Yogasana Championship – 2025, organised by Acharya Yoga Youth Club (R) on the occasion of its 12th Anniversary.





### GANHAVI M.S

Congratulations to Ganhavi M.S. from Vijaya Composite PU College for her outstanding performance at the Bengaluru South Zone Athletic Meet 2025-26!



© 2025 - VIJAYA GROUP OF INSTITUTIONS

# SPECIAL EVENTS

Date: 11/07/2025

## VEIT DEGREE COLLEGE
## INAUGURATION OF 1st YEAR CLASSES - 2025











## VEIT DEGREE COLLEGE
## FRESHES DAY – 2025

11/07/2025








© 2025 - VIJAYA GROUP OF INSTITUTIONS

# SPECIAL EVENTS

## 12/07/2025 — VIJAYA COMPOSITE PU COLLEGE PARENTS AMBASSADOR – 2025







## VIJAYA ENGLISH PRIMARY SCHOOL INVESTITURE CEREMONY - 2025

Date: 12/07/2025














© 2025 - VIJAYA GROUP OF INSTITUTIONS

# SPECIAL EVENTS

Date: 15/07/2025

## KALAPARVA- 2025
## PUC Cultural Fest






















© 2025 - VIJAYA GROUP OF INSTITUTIONS

# SPECIAL EVENTS

## 15/08/2025

## INDEPENDENCE DAY - 2025 CELEBRATIONS @ VGI








## VIJAYA ENGLISH PRIMARY SCHOOL SRIKRISHNA JANMASTAMI - 2025

## 16/08/2025







© 2025 - VIJAYA GROUP OF INSTITUTIONS

# SPECIAL EVENTS

23/08/2025

## VHS & VEPS
## CUBES DON'T GROW ON TREES - WORKSHOP








23/08/2025

## VIJAYA HIGH SCHOOL
## SCIENCE EXHIBITION










© 2025 - VIJAYA GROUP OF INSTITUTIONS

# SPECIAL EVENTS

## GANESHA CHATHURTHI CELEBRATIONS @ VGI

29/08/2025








## VIJAYA ENGLISH PRIMARY SCHOOL ARTISTIC TALENTS AND CREATIVITY

31/08/2025




© 2025 - VIJAYA GROUP OF INSTITUTIONS

# ART GALLERY




**Aryan.M**
10th Std,
VEPS



**Anjan J**
2nd PUC 'A' VCPUC



**Vaishnavi**
1st year B.com
Veit Degree College



**M Nishanth**
5th std ,VKHPS


© 2025 - VIJAYA GROUP OF INSTITUTIONS

VOICE OF VIJAYA
THE DIGITAL MAGAZINE
BI-MONTHLY
JULY – AUG – 2025
ISSUE - 30

# B.COM 6th Sem RESULTS – 2022-25



**Sumedh G R**
**Marks (718/800)**

## OUTSTANDING



**Renuka H**
**Marks (703/800)**



**Shree Bindhu**
**Marks (694/800)**



**Vivek T V**
**Marks (686/800)**



**N M Vasantha Narayani**
**(658/800)**

## A+ EXCELLENT

## SUBJECT WISE TOPPERS

| Subject | Marks | Names |
|---|---|---|
| Advanced Financial Management | 94/ 100 | Renuka H |
| Assessment of Persons Other than Individuals and Filing of ITR | 91/100 | Shree Bindhu |
| Income Tax Law and Practice – II | 95/100 | Vivek T V |

| Subject | Marks | Names |
|---|---|---|
| Income Tax Law and Practice – II | 97/100 | Sumedh G R |
| Indian Accounting Standards – II | 86/100 | |
| Management Accounting | 96/100 | |
| Internship | 98/100 | |


© 2025 - VIJAYA GROUP OF INSTITUTIONS

# BCA 6th Sem RESULTS – 2022-25



**Likitha M**
**Marks (622/700)**



**B.Rakshitha**
**Marks (617/700)**



**Vikas**
**Marks (613/700)**



**Bhavana**
**Marks (609/700)**



**Purushotham J**
**Marks (596/700)**

## A+ EXCELLENT

## SUBJECT WISE TOPPERS

| Subject | Marks | Names |
|---|---|---|
| Machine Learning | 93/ 100 | Vikas |
| | 80/100 | Shashank |
| Mobile App Dev | 95/100 | B. Rakshitha |
| | 88/100 | Purushotham |
| E Content Design | 98/100 | B.Rakshitha |
| | 96/100 | Likitha M |
| Software Testing | 91/100 | Likitha M |
| | 90/100 | Bhavana B Y |

| Subject | Marks | Names |
|---|---|---|
| Machine learning Lab | 50/50 | Likitha |
| | 50/50 | B Rakshitha |
| Mobile App Dev Lab | 50/50 | Bhavana B Y |
| | 49/50 | Vikas |
| Project work | 96/100 | Vikas |
| | 94/100 | Likitha M |
| Internship | 100/100 | Vikas |
| | 100/100 | Likitha M |


© 2025 - VIJAYA GROUP OF INSTITUTIONS

# VIJAYA GROUP OF INSTITUTIONS

## VEIT DEGREE COLLEGE
B.Com & BCA
(Affiliated to Bangalore University)

## VIJAYA COMPOSITE P U COLLEGE
Science & Commerce
PCMB | PCME | PCMCs CEBA | MSBA | SEBA

## Vijaya Academy of Science Education (VASE)
JEE | K-CET | NEET

## VIJAYA HIGH SCHOOL
$8^{th}$ to $10^{th}$ Standard

## VIJAYA KANNADA HIGHER PRIMARY SCHOOL
$1^{st}$ to $7^{th}$ Standard

## VIJAYA ENGLISH PRIMARY SCHOOL
$1^{st}$ to $10^{th}$ Standard

## Samvruddhi House of Children
Montessori

www.vijayainstitutions.in

*For more details:*

**9513751956**
**9513148222**

**Follow us**